# ಸಾಪ್ತಾಹಿಕ ಪ್ರಭ

1 ಆಗಸ್ಟ್ 2010

www.kannadaprabha.com    e-mail:kannadaprabha@gmail.com


ಕನ್ನಡ ಸಾಹಿತ್ಯ ಲೋಕದಲ್ಲಿ ಈ ವರ್ಷ ಕಾದಂಬರಿ ಪರ್ವ. ಕಳೆದ 3 ವರ್ಷಗಳಲ್ಲಿಯೂ ಇಷ್ಟು ಕಾದಂಬರಿಗಳು ಬಂದದ್ದಿಲ್ಲ. ಇಲ್ಲಿವೆ ಸಿದ್ಧವಾಗಿರುವ, ಹೊರ ಬರಲು ಅಣಿಯಾಗುತ್ತಿರುವ ಕಾದಂಬರಿಕಾರರ ಲೋಕ. ವಿಶಿಷ್ಟ ಕಾದಂಬರಿಕಾರರು ವಿಶೇಷ ಮೂಡ್‌ನಲ್ಲಿ ಬರೆಯುತ್ತಿರುವ ಈ ಅಕ್ಷರ ಹಬ್ಬಕ್ಕೆ 'ಸಾಪ್ತಾಹಿಕ ಪ್ರಭ'ದ ಪುಟ್ಟ ನಲ್ನುಡಿ. ಮತ್ತೆ ಕಾದಂಬರಿಗಳನ್ನು ಬರೆದು ನಮ್ಮೆಲ್ಲರನ್ನೂ ಓದುವಂತೆ ಮಾಡುವ ಇವರೆಲ್ಲರನ್ನೂ ಓದೋಣ... ಇದಕ್ಕಿಂತ ಸಂಭ್ರಮ ಬೇಕೇ?

## 1. ಏನ್ ನಿಮ್ ಕತೆ?

(ಕೇಂದ್ರ ವೃತ್ತಾಂತ)

ಡಾವೆಂಕಿ

'ಕವಿಯಾಗಿ, ಕತೆಗಾರನಾಗಿ, ವಿಮರ್ಶಕನಾಗಿ, ಕಾದಂಬರಿಕಾರನಾಗಿ ಏನೇನೋ ಆಗಿ ಎಂಥೆಂಥದ್ದೋ ಬಹುಮಾನ, ಮಾನ, ಸನ್ಮಾನ ಪಡೆದವನಾಗಿ, ಇನ್ನೂ ಏನೂ ಆಗಿಲ್ಲ, ನಾನು ಏನೂ ಬರೆದಿಲ್ಲ ಎಂದು ಸದಾ ಕೊರಗುವ ಅತೃಪ್ತ ಬರೆಹಗಾರ ನಾನು. ಈ ಸೃಜನಶೀಲ ಅತೃಪ್ತಿ ಎಲ್ಲ ಅತೃಪ್ತಿಗಿಂತಲೂ ಭೀಕರ, ಅಸಹನೀಯ. ಹಂದಿಗಳಂತೆ ದಿನನಿತ್ಯದ ಕಾಮನೆಗಳಲ್ಲಿ ಸುಖಿಸುವವರನ್ನು ಕಂಡರೆ ನನಗೆ ಕರುಬುವಂತಾಗುತ್ತದೆ. ಹಾಗೇನಾದರೂ ನಾನು ಆ ಕಡೆ ಒಂದು ಹೆಜ್ಜೆ ಇಟ್ಟರೆ ಬೆಂಕಿ ತುಳಿದಂತಾಗುತ್ತದೆ. ಬರೆವಣಿಗೆಯ ಈ ಇಬ್ಬಾಯ ಖಡ್ಗದ ಹೊಡೆತದಲ್ಲಿ ಕೆಲವೊಮ್ಮೆ ಸುಖವೂ ಇರಬಹುದು, ಬಿಡುಗಡೆಯೂ ಇರಬಹುದು, ಅಮರತೆಯ, ಅವಿನಾಶಿತೆಯ ಕ್ಷಣಗಳೂ ಇರಬಹುದು. ಇದನ್ನೇ ನಾವು 'ಅಕ್ಷರ' ಅನ್ನುತ್ತೇವಲ್ಲವೇ? ಈ ಅಕ್ಷರದ ಹಸಿವಿಗೆ ಬಿದ್ದ ಬಡ ಪಶು ನಾನು' ಹೀಗೆ ಸಹೋದ್ಯೋಗಿ ಅನಂತ ಹುದೆಂಗಜೆಯವರಿಗೆ ಹೇಳುವ ಪ್ರಹ್ಲಾದ ಅಗಸನಕಟ್ಟೆಯಂತೆಯೇ ಕನ್ನಡ ಸಾರಸ್ವತ ಲೋಕದ ಅಕ್ಷರ ದಾಹ ಹೆಚ್ಚಾದ ಎಲ್ಲಾ ಲಕ್ಷಣಗಳೂ ಗೋಚರಿಸುತ್ತಿವೆ. ಸುಮಾರು 3 ವರ್ಷಗಳ ಕಾದಂಬರಿಗಳನ್ನು ಲೆಕ್ಕ ಹಾಕಿದರೂ ಈ ವರ್ಷ ಹೊರ ಬರುತ್ತಿರುವ, ಬರಲು ಅಣಿಯಾಗುತ್ತಿರುವ ಕಾದಂಬರಿಗಳ ಲೋಕ ಬಹುದೊಡ್ಡದು. ಎಷ್ಟೊಂದು ವೈವಿಧ್ಯದ ಬರೆಹಗಾರರು ನಮ್ಮಲ್ಲಿದ್ದಾರೆ! ಮತ್ತು ಅವರ ವಸ್ತು ವೈವಿಧ್ಯವೂ ಕೂಡಾ ಅಚ್ಚರಿ ತರಿಸುವಂಥದ್ದು.

ಹೈದರಾಬಾದ್ ನಿಜಾಮರ ಕಾಲದ ರಜಕಾರ್ ಚಳವಳಿಯ ಹಿನ್ನೆಲೆಯ ಕಥಾವಸ್ತು. ಚಳುವಳಿ ಯಾವ ಬಗೆಯಲ್ಲಿ ನಡೆದಿತ್ತು? ರಾಯಚೂರಿನಲ್ಲೂ ಹೇಗೆ ಕಮ್ಯೂನಿಸ್ಟರು ಭಾಗಿಯಾಗಿದ್ದರು, ತೆಲಂಗಾಣ ಚಳುವಳಿ, ಸ್ವಾತಂತ್ರ್ಯ ಸಿಕ್ಕ ಮೇಲೆ ಏನಾಯಿತು? ಬ್ರಿಟಿಷರಿಗೆ ಡೊಗ್ಗು ಸಲಾಮು ಹೊಡೆದ ಪುಡಾರಿಗಳೇ ಹೇಗೆ ಮುಂದೆ ಮಂತ್ರಿಗಳಾದರು? 1948 ರ ವರೆಗೂ ಕೇಳಿದ್ದು ನೋಡಿದ್ದು ಇವೆಲ್ಲವೂ ಕಥಾವಸ್ತುವಾಗಿದೆ. ಅಮರೇಶ ನುಗಡೋಣಿಯವರ ಅಪಾರ ಒತ್ತಾಸೆಯಿಂದ ಈ ಕೃತಿ ರಚನೆ ಮುಗಿದಿದೆ.

**–ಜಂಬಣ್ಣ ಅಮರಚಿಂತ, ರಾಯಚೂರು**
**(ಕದಡಿದ ನೀರು)**






ಬಹಳ ಹಿಂದೆ ತನ್ನ ಸೊಸೆಯೊಬ್ಬಳಿಗೆ ತುಂಬ ಹಿಂಸೆ ಕೊಡುವ ನಮ್ಮ ದೊಡ್ಡಜ್ಜಿ ಒಬ್ಬಳಿದ್ದಳು. ಆ ಸೊಸೆ ಒಂದು ದಿನ ಎಲ್ಲಿಯೋ ಕಾಲು ಜಾರಿ ಬಿದ್ದು ನಾಲಿಗೆಗೆ ಗಾಯವಾದ ನೆಪದಲ್ಲಿ ಇದ್ದಕ್ಕಿದ್ದಂತೆ ಮೂಕಿಯಾಗಿಬಿಟ್ಟಳು. ಎಲ್ಲ ರೀತಿಯ ಚಿಕಿತ್ಸೆ ಮಾಡಿಸಿದರೂ ಗುಣಪಡಿಸಲಾಗಲಿಲ್ಲ. ಆ ನಂತರ 12 ವರ್ಷಗಳ ಬಳಿಕ ನಮ್ಮ ದೊಡ್ಡಜ್ಜಿ ತೀರಿಹೋದ ದಿನವೇ ಅವಳ ಸೊಸೆಗೆ ಇದ್ದಕ್ಕಿದ್ದಂತೆ ಬಾಯಿಬಂತು. ಬರೆಯಲು ಕೂತಾಗ ಮನಸ್ಸಿನಲ್ಲಿದ್ದದ್ದು ಇಷ್ಟೇ. ಆದರೆ ಬರಹ ನನಗೇ ಅಚ್ಚರಿ ಎನಿಸುವಂತೆ ಬೇರೆ ಬೇರೆ ದಾರಿ ತಾನೇ ಕಂಡುಕೊಂಡಿತು.

**– ಸುನಂದಾ ಪ್ರಕಾಶ ಕಡಮೆ**



ಒಬ್ಬ ಕಲಾವಿದನೊಳಗೆ ಬೆಳೆಯುವ ಅಹಂಕಾರ, ಅದರ ಪರಿಣಾಮಗಳು ಮತ್ತು ಬಿಡುಗಡೆ/ ವಿಕಾಸ ಕ್ರಮ– ಕಾದಂಬರಿಯ ವಸ್ತು. ಸ್ವತಃ ನನ್ನೊಳಗಿನ ಅಹಂಕಾರವನ್ನು ನಾನು ನೋಡಿಕೊಳ್ಳುವ ಪ್ರಯತ್ನದಲ್ಲೇ ವಸ್ತು ಹುಟ್ಟಿದ್ದು ಎನ್ನಬಹುದೇನೋ. ಕೃತಿ ಬೆಳೆಯುತ್ತ ಸುತ್ತಲಿನ ಸಂಗತಿಗಳು ಹೆಣೆದುಕೊಳ್ಳತೊಡಗಿದವು. ಹಾಗೆಯೇ ಅದರ ಆಯಾಮಗಳೂ ಕೂಡ; ಕಾದಂಬರಿ ಬೆಳೆಯಿತು. ನನ್ನನ್ನು ಬೆಳೆಸಿತು.

**–ಜ.ನಾ.ತೇಜಶ್ರೀ, (ಬರೀ ಎರಡು ರೆಕ್ಕೆ)**



'ನನ್ನನ್ನು ಪ್ರೇಮಿಸಲು ಕೇಳಿ, ನನ್ನಿಂದ ನಿರಾಕರಿಸಿಕೊಂಡ ಆ ಹುಡುಗಿ ಕೆಲದಿನಗಳಲ್ಲೇ ನನ್ನಪ್ಪನ ಹಾಸಿಗೆಯಲ್ಲಿ ಇದ್ದ ಘಟನೆ. ಅವರಿಬ್ಬರ ನಡುವೆ ಹುಟ್ಟಿಕೊಂಡ ಆಕರ್ಷಣೆಗಳು ನನಗೆ ತೀವ್ರ ಕುತೂಹಲದ್ದಾಗಿದ್ದವು. ಮತ್ತು ಅಪ್ಪನ ವೈಯಕ್ತಿಕ ತಲ್ಲಣಗಳನ್ನು ಚಿಕ್ಕಂದಿನಿಂದ ಗ್ರಹಿಸಿದ್ದ ನನ್ನಲ್ಲಿ ಅವನ ಇತ್ತೀಚಿನ ಅನೇಕ ನಡೆಗಳು, ಅದೇ ತಾನೇ ಹೊಸದಾಗಿ ಪ್ರೇಮಕ್ಕೆ ಸಿಲುಕಿದವನ ಆತಂಕಗಳನ್ನು ಅವನಲ್ಲಿ ಕಾಣುತ್ತಿದ್ದೆ. ಅವನ ಬಗ್ಗೆ ಬರೆಯುವ ಉತ್ಸಾಹದಲ್ಲಿದ್ದಾಗಲೇ ಅ






ವನು ಹೊರಟು ಹೋದ. ಆದರೂ ಧೃತಿಗೆಡದ ಆ ಹುಡುಗಿ ಇನ್ನೂ ಹೈವೇಯ ಸಿಗ್ನಲ್‌ಗಳಲ್ಲಿ ಲಾರಿಗಳಿಗೆ ಹೂ ಮಾರುತ್ತ ಲವಲವಿಕೆಯಿಂದ ನನ್ನಲ್ಲಿ ಬರೆಯುವ ಹುಮ್ಮಸ್ಸು ಹುಟ್ಟಿಸುತ್ತಿರುವುದು ಆಶ್ಚರ್ಯಕ್ಕಿಂತಲೂ ಅನಿವಾರ್ಯ ಅನ್ನಬಹುದು. ಆ ಅನಿವಾರ್ಯದಿಂದಲೇ ನನ್ನ ಮೊದಲ ಕಾದಂಬರಿ 'ಅಪ್ಪನ ಪ್ರೇಯಸಿ'ಯು ಬರವಣಿಗೆಯ ಹಂತದಲ್ಲಿದೆ'.

**–ವಿ.ಆರ್.ಕಾರ್ಪೆಂಟರ್, ಬೆಂಗಳೂರು**
**(ಅಪ್ಪನ ಪ್ರೇಯಸಿ)**



ನಮ್ಮ ಕಾಲದಲ್ಲಿ ದಾಂಪತ್ಯವೆಂಬ ಸಂಸ್ಥೆಯು ಮನುಷ್ಯ ಸಂಬಂಧದ ಒಂದು ಸ್ವರೂಪವಾಗಿ ಎದುರಿಸುತ್ತಿರುವ ಬಿರುಕು ಮತ್ತು ತಳಮಳ ಕಾರಣವೋ, ಇಲ್ಲ ಪರಿಣಾಮವೊ? ಸಮಾಜ ಜೀವನವೇ ಎಲ್ಲ ದಿಕ್ಕುಗಳಲ್ಲೂ ಅನುಭವಿಸುತ್ತಿರುವ ಬಿರುಕು ಮತ್ತು ತಳಮಳ ದಾಂಪತ್ಯ ಸಂಬಂಧದಲ್ಲೂ ಫಲಶ್ರುತಿ ಕಾಣುತ್ತಿದೆಯೇ? ದಾಂಪತ್ಯದ ಆಕಾಂಕ್ಷೆಯೇ ಕಡಿಮೆಯಾಗುತ್ತಿರುವ ಕಾಲದಲ್ಲಿ ನಾವು ಬದುಕುತ್ತಿದ್ದೇವೆಯೇ? ಈ ಪ್ರಶ್ನೆಗಳನ್ನು ಈ ಕಾದಂಬರಿಯಲ್ಲಿ ಶೋಧಿಸಿದ್ದೇನೆ.
ಕಾದಂಬರಿಯ ವಸ್ತು ಸಮಕಾಲೀನವು ಹೌದು. ಸಾರ್ವಕಾಲಿಕವೂ ಹೌದು. ಸಮಕಾಲೀನ ಬದುಕಿನಲ್ಲೇ ಪುರಾಣದ ಎಳೆಗಳು ಇದ್ದೇ ಇರುತ್ತದೆ. ಹೀಗಾಗಿ ಈ ಬರವಣಿಗೆಯಲ್ಲಿ ನಾನು ವಾಸ್ತವವಾದಿ ಮಾರ್ಗ ಮತ್ತು ಫ್ಯಾಂಟಸಿ ಎರಡನ್ನೂ ಬಳಸಿದ್ದೇನೆ. ಈ ಕಾದಂಬರಿಯ ಸ್ಥಳ ಪುರಾಣವು ಕೋದಂಡರಾಪುರವೆಂಬ ಕಾಲ್ಪನಿಕವಾದ ಸಮಕಾಲೀನ ಸಣ್ಣಪಟ್ಟಣವೊಂದರಲ್ಲಿ ನಡೆಯುತ್ತದೆ. ಆವರ್ತನೆಗೊಳ್ಳುತ್ತಲೇ ಹೋಗುವ ಕಥನಗಳನ್ನು ದೀರ್ಘ ಸ್ಪರ್ಧಾತ್ಮಕ ರೂಪದಲ್ಲಿ ಹೇಳುವ ಸ್ಪಷ್ಟ ಪುರಾಣಿಕರೊಬ್ಬರ ಕಥಾಕ್ರಮವನ್ನು ನಾನು ಅನುಸರಿಸಲು ಪ್ರಯತ್ನಿಸಿದ್ದೇನೆ.
ಇಂತಹದೊಂದು ಕಾದಂಬರಿ ಬರೆಯುವ ಹೊಳಹು ಬಹಳ ದಿನಗಳಿಂದ ಇದ್ದರೂ, ಮುಂಬೈಗೆ ವರ್ಗವಾಗಿ ಬಂದಮೇಲೆ ಎಲ್ಲ ರೀತಿಯಿಂದಲೂ ಅನುಕೂಲ ಹೊಂದಿರುವ ಮೇಲು ಮಧ್ಯಮವರ್ಗದವರ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸುತ್ತಿದ್ದಾಗ ಆ ಜನರಿಗೆ ಎಲ್ಲ ಸೌಕರ್ಯ ಸಂಪತ್ತುಗಳಿದ್ದರೂ ನೆಮ್ಮದಿಯಾಗಿ, ಅರ್ಥಪೂರ್ಣವಾಗಿ ಬದುಕುವ ಆಕಾಂಕ್ಷೆಯೇ ಇಲ್ಲವಲ್ಲ ಎಂದು ಯೋಚಿಸಲು ಪ್ರಾರಂಭಿಸಿದಾಗ ಈ ಕಾದಂಬರಿಯ ಸ್ವರೂಪ ಸಿಕ್ಕಿತು. ವಿಲ್ ಟು ಲಿವ್ ಮತ್ತು ಡಿಸೈರ್ ಟು ಲಿವ್ ಎರಡೂ ಕ್ಷೀಣವಾಗಿರುವ ಕಾಲವನ್ನು ನಾವು ಪ್ರತಿನಿಧಿಸುತ್ತಾ ಸಾಮಾಜಿಕವಾಗಿ ಅಸೂಕ್ಷ್ಮರಾಗುತ್ತಿದ್ದೇವೆಯೇ?



**–ಕೆ.ಸತ್ಯನಾರಾಯಣ, ಮುಂಬಯಿ (ವಿಚ್ಛೇದನಾ ಪರಿಣಯ)**

ನಮ್ಮ ಕುಟುಂಬದ ಒಂದು ಮಹತ್ವದ ಘಟನೆ ಈ ಕಾದಂಬರಿಗೆ ಆಯ್ದುಕೊಂಡಿದ್ದೇನೆ. ನಾನು ಹುಟ್ಟುವದಕ್ಕಿಂತಲೂ ಮೊದಲೇ ಜರುಗಿದ ಘಟನೆಯಾದ್ದರಿಂದ ಪೂರ್ತಿ ಕಲ್ಪನೆಯಲ್ಲಿಯೇ ಆಗಿನ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದೇನೆ. ಇಂತಹದೇ ವಸ್ತುವೆಂದು ನನ್ನ ಕಾದಂಬರಿಗೆ ಇಲ್ಲ. ಹಾಗೆ ಯಾವ ಕಾದಂಬರಿಯನ್ನೂ ವಿಷಯವೊಂದನ್ನು ಸಮರ್ಥಿಸಲು ಬರೆಯಬಾರದೆಂದು ನನ್ನ ವಿನಮ್ರ ಅನಿಸಿಕೆ.




**–ವಸುಧೇಂದ್ರ, ಬೆಂಗಳೂರು**
**(ಹರಿಚಿತ್ತ ಸತ್ಯ)**





ಅಣ್ಣ ತಮ್ಮಂದಿರಿಬ್ಬರ ನಡುವಣ ಪ್ರೀತಿ – ದ್ವೇಷಗಳ ತಿಕ್ಕಾಟವೇ ನನ್ನ ಕಾದಂಬರಿಯ ಮೂಲವಸ್ತುವಾದರೂ, ಪಾರ ಎಂಬವಳ ಕತೆಯೂ ಕಾದಂಬರಿಯ ಉದ್ದಕ್ಕೆಲ್ಲ ಹರಿದುಕೊಂಡು ಅದಕ್ಕೆ ಇನ್ನೊಂದು ಆಯಾಮವನ್ನು ಕೊಡುತ್ತದೆ. ಹಾಗೆಯೇ ಇದು ಪಾರ, ಲಕ್ಷ್ಮೀದೇವಿ, ಅವಳ ಸೊಸೆ ಕಮಲಿ ಈ ಮೂವರು ಹೆಂಗಸರ ಬದುಕಿನ ಹೋರಾಟದ ಕತೆಯೂ ಹೌದು. 1880ರ ಸುಮಾರಿನಿಂದ 1980ರ ವರೆಗಿನ ಸುಮಾರು ನೂರು ವರ್ಷಗಳ ಕತೆಯಲ್ಲಿ ಜಮೀನ್ದಾರಿ ಅಥವಾ ಊಳಿಗಮಾನ್ಯ ಪದ್ಧತಿಯ ಏರು–ಬೀಳುಗಳನ್ನು ಪಿತೃಪ್ರಧಾನ ಸಮಾಜದ ತಮ್ಮ ಸೀಮಿತ ಸ್ವಾತಂತ್ರ್ಯದಲ್ಲಿಯೂ ಹೆಂಗಸರು ಕಟ್ಟಿಕೊಳ್ಳುವ ತಮ್ಮದೇ ಜಗತ್ತನ್ನು ತೋರಿಸಲು ಯತ್ನಿಸಿದ್ದೇನೆ. ಬಹಳ ಸಮಯದಿಂದ ನನ್ನನ್ನು ಕಾಡುತ್ತಿದ್ದ ಕಥಾವಸ್ತುವೊಂದು ಈ ಕಾದಂಬರಿಯ ಮೂಲಕ ಬಿಡುಗಡೆ ಹೊಂದಿದೆ.

**–ಮಿತ್ರಾ ವೆಂಕಟ್ರಾಜ, ಮುಂಬಯಿ**
**(ಪಾಚಿ ಕಟ್ಟಿದ ಪಾಗಾರ)**





5 ನೇ ಪುಟಕ್ಕೆ



2 ಹೋರಾಟಗಳ ಕಲಿ ಚಂದ್ರಬಾಬು ನಾಯ್ಡು



3 Kishorekumar.com ಜಯದೇವ ಪ್ರಸಾದ ಮೊಳೆಯಾರ



4 ಏನೂ ಮಿಸ್ಟೇಕ್ ಇಲ್ಲ



5 ಕಾದಂಬರಿ ಬರೆದೇ ಬದುಕಬಹುದು



6 ಸನಾ ಕಣ್ಣಲಿ

